ಮೇ ಮುಗಿದರೂ ಮಳೆ ಬೀಳದೇ, ಸುನಾಮಿಗೆ ಮುನ್ನದ ಸಮುದ್ರದಂತೆ ಹಿಂದೆ ಹೋಗಿ ನಿಂತಿದ್ದ ಶರಾವತಿ ಮುಳುಗಡೆಯ ಹಿನ್ನೀರನ್ನು ಚಿಂತಾಕ್ರಾಂತನಾಗಿ ನೋಡುತ್ತಾ ನಿಂತಿದ್ದ ಶ್ರೀಮುಖ. ಮೊದಲೆಲ್ಲ ಮೇ ಕೊನೆಯ ವಾರಕ್ಕೇ ಬೀಳುತ್ತಿದ್ದ ಮಳೆ ಮುಳುಗಡೆ ನೀರನ್ನು ಇಷ್ಟೆಲ್ಲ ಹಿಮ್ಮೆಟ್ಟಲು ಬಿಡುತ್ತಿರಲಿಲ್ಲ. ಹೆಚ್ಚೆಂದರೆ ಗುಡ್ಡದ ಎದೆಯ ತನಕ ಅಷ್ಟೇ. ಆಗೆಲ್ಲ ಬಿಸಿಲೂ ಇಷ್ಟಿರಲಿಲ್ಲ. ಆದರೆ, ಈ ಬಾರಿ ಈಜಿಕೊಂಡೇ ಹೋಗಬಹುದೇನೋ ಎಂಬಂತಾಗಿದೆ ಎರಡು ದಡಗಳ ನಡುವಿನ ದೂರ. ಈಚೆ ದಡದಲ್ಲಿ ನಿಂತು ಆಕಳಿಸಿದರೆ ಅದು ಆಚೆ ದಡದವನಿಗೂ ಕೇಳಿಸಿ ಅವನಿಗೂ ಆಕಳಿಕೆ ಬರುವಷ್ಟು. ಮುಳುಗಡೆಯ ನೀರು ಆರುವುದು, ಉಕ್ಕುವುದು ಇದ್ದದ್ದೇ. ಆದರೆ, ಈ ಬಾರಿ 'ಲಾಂಚು ನಿಲ್ಲಲಿದೆ' ಎಂಬ ಮಾತು ಹುಟ್ಟಿದಾಗಿನಿಂದ ಅವನ ಆತಂಕ ದುಪ್ಪಟ್ಟಾಗಿತ್ತು. ಈಚೆ ಹಸಿರುಮಕ್ಕಿಯ ದಡದಲ್ಲಿರುವ ಅವನ ಅಂಗಡಿಗೆ ಗಿರಾಕಿಗಳು ಬರುತ್ತಿದ್ದುದೇ ಆಚೆಯ ಸಾಗರದ ಕಡೆಯಿಂದ. ಅಲ್ಲದೇ ಅಂಗಡಿಗೆ ಬೇಕಾದ ಸಾಮಾನುಗಳೂ ಅಲ್ಲಿಂದಲೇ ತೇಲಿ ಬರಬೇಕಿತ್ತು. ಹೀಗಿರುವಾಗ ಲಾಂಚು ನಿಂತರೆ ಬರೀ ಒಂದು ಕಟ್ಟು ಕೊತ್ತುಂಬರಿ ಸೊಪ್ಪು ತರಲಿಕ್ಕೆ ಇಡೀ ಬ್ರಹ್ಮಾಂಡವನ್ನೇ ಸುತ್ತು ಹಾಕಿಕೊಂಡು ಆಚೆಯ ಪೇಟೆಗೆ ಹೋಗಬೇಕಾಗುತ್ತದೆ. ಅದೂ ಸಾಲದೆಂಬಂತೆ ಇಲ್ಲಿ ಸೇತುವೆ ಬೇರೆ ಮಾಡುತ್ತಿದ್ದಾರೆ. ಒಮ್ಮೆ ಸೇತುವೆ ಎರಡು ದಡಗಳನ್ನು ಬೆಸೆದು ಬಿಟ್ಟಿತೆಂದರೆ ಇಡೀ ಸಾಗರ ಪೇಟೆಯೇ ಅನಾಮತ್ತಾಗಿ ಹಸಿರುಮಕ್ಕಿಯ ಕೈಗೆ ಸಿಕ್ಕಿಬಿಡುತ್ತದೆ. ಮನೆ ಮನೆಯಲ್ಲೂ ಬೈಕಿರುವ ಮಂದಿ ಬೆಳಗ್ಗೆ ಎದ್ದು ಕಾಫಿ ಕುಡಿಯಲಿಕ್ಕೆ ನೇರ ಸಾಗರಕ್ಕೇ ಹೋದರೂ ಹೋದರೇ! ಹೀಗಿರುವಾಗ ಇಲ್ಲಿ, ಈ ದಡದ ಗುಡ್ಡದ ಮೇಲೆ ಋಷಿಯೊಬ್ಬ ಕಟ್ಟಿ ಹೋದ ಪುಟ್ಟ ಕುಟೀರದಂತೆ ಸೋಪು, ತರಕಾರಿ, ತಿಂಡಿ, ಚಾಕೋಲೇಟು, ಟೀ, ಪಕೋಡಾಗಳನ್ನು ತೊಟ್ಟು ನಿಂತಿರುವ ತನ್ನ ಅಂಗಡಿಯ ಗತಿ ಏನು? ಎಂದುಕೊಳ್ಳುತ್ತ ತಲೆ ಕೆಡಿಸಿಕೊಳ್ಳುತ್ತಿದ್ದಾಗಲೇ ಅವನ ಫೋನು ರಿಂಗಾಯಿತು. ಎತ್ತಿ 'ಹಲೋ' ಎಂದ. ಅತ್ತಲಿಂದ 'ಹ್ಞೂಂ' ಎಂದಿತು ನವಿರಾದ ಹೆಣ್ಣು ದನಿ. ಅವನ ಬೆಳಗಿಗೆ, ಅವನ ಈ ನಡು ನೀರಿನ ಚಿಂತೆಗೆ, ಅದರ ಏಕಾಂತಕ್ಕೆ ಹೊಸದಾಗಿ ಸೇರ್ಪಡೆಯಾಗಿರುವ ಹೊಸ ಗೆಳತಿ ಮನೋಹರಿಯ ದನಿ!

ಈಗಷ್ಟೇ ಕಣ್ಬಿಟ್ಟ ಇಂಥಾ ಅರೆ ಎಚ್ಚರದ ಕ್ಷಣಗಳಲ್ಲಿ ಮೊದಲಿಗೆ ಶ್ರೀಮುಖನಿಗೇ ಕರೆ ಮಾಡುವುದು ಅವಳ ಹೊಸ ಅಭ್ಯಾಸ. ಇನ್ನೈದು ನಿಮಿಷ ಮಲಗುತ್ತೇನೆ ಎಂದು ಮಲಗಿದಾಗ ಅಚಾನಕ್ಕಾಗಿ ಬಿದ್ದ ಕನಸಿನಂತೆ ಅವಳ ಬಾಳಲ್ಲಿ ಬಂದವನು ಶ್ರೀಮುಖ. ಸಂಪೇಕಟ್ಟೆಯಲ್ಲಿನ ಗೆಳತಿಯೊಬ್ಬಳು ಇನ್ನಿಲ್ಲದಂತೆ ಒತ್ತಾಯ ಮಾಡಿದ್ದರಿಂದ ಅವಳ ಮದುವೆಗೆ ಬೆಂಗಳೂರಿನಿಂದ ಬಂದಿದ್ದಳು ಮನೋಹರಿ. ಹೊಳೆಯಾಚೆ ಸಾಗರಕ್ಕೆ ದಾಟಿಸುವ ಕೊನೆಯ ಲಾಂಚು ಐದೂ ಮೊವ್ವತ್ತಕ್ಕೆ ಎನ್ನುವುದು ಸಂಜೆ ನಾಲ್ಕರ

